**ಸಾಕ್ಷಿಯನ್ನು ದಿನಾಂಕ 02-04-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಹೆಚ್ಚುವರಿ ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ. ಜಿ.ಆರ್.ಆರ್. ವಕೀಲರಿಂದಃ**

ನಾನು ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರಿಕೆ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

| | | |
|---|---|---|
| Quotation issued by the calicut engineering | ನಿಪಿ-6 | ಎಂದು ಗುರುತಿಸಲಾಯಿತು. |
| Cash credit bill issued by Hi Tech auto works | ನಿಪಿ-7 | ಎಂದು ಗುರುತಿಸಲಾಯಿತು. |
| Cash credit bill issued by Hi Tech auto works | ನಿಪಿ-8 | ಎಂದು ಗುರುತಿಸಲಾಯಿತು. |
| Cash bill issued by Benz Auto parts | ನಿಪಿ-9 | ಎಂದು ಗುರುತಿಸಲಾಯಿತು. |
| Bill issued by Car club | ನಿಪಿ-10 | ಎಂದು ಗುರುತಿಸಲಾಯಿತು. |
| Bill issued by Santhosh Automobiles | ನಿಪಿ-11 | ಎಂದು ಗುರುತಿಸಲಾಯಿತು. |
| Bill issued by Santhosh Automobiles | ನಿಪಿ-12 | ಎಂದು ಗುರುತಿಸಲಾಯಿತು. |
| Bill issued by Santhosh Automobiles | ನಿಪಿ-13 | ಎಂದು ಗುರುತಿಸಲಾಯಿತು. |
| Bill issued by Hi Tech Auto works | ನಿಪಿ-14 | ಎಂದು ಗುರುತಿಸಲಾಯಿತು. |
| Notarized copy of the D.L of the petitioner (after verifying the same with the Original) | ನಿಪಿ-15 | ಎಂದು ಗುರುತಿಸಲಾಯಿತು. |
| Notarized copy of the R.C of the petitioner (after verifying the same with the Original) | ನಿಪಿ-16 | ಎಂದು ಗುರುತಿಸಲಾಯಿತು. |
| Notarized copy of the Aadhaar card of the petitioner (after verifying the same with the Original) | ನಿಪಿ-17 | ಎಂದು ಗುರುತಿಸಲಾಯಿತು. |
| Copy of the Insurance policy | ನಿಪಿ-18 | ಎಂದು ಗುರುತಿಸಲಾಯಿತು. |
| Bill issued by Auto service and agencies | ನಿಪಿ-19 | ಎಂದು ಗುರುತಿಸಲಾಯಿತು. |

**ಪಾಟೀಸವಾಲು- 4 ನೇ ಎದುರುದಾರರ ಪರ ಶ್ರೀ ಎಮ್.ಇ.ಎಮ್ ವಕೀಲರಿಂದಃ**

ಅಪಘಾತ ಎದುರುದಾರರ ತಪ್ಪಿನಿಂದ ಆಗಿದೆ. ಆ ಕಾರಣದಿಂದ 4 ನೇ ಪ್ರತಿವಾದಿ ಯಾವುದೇ ವಿಮಾ ಪರಿಹಾರವನ್ನು ನೀಡಲು ಬದ್ದರಲ್ಲ ಎಂದರೆ ನಾನು ನನ್ನವಾಹನಕ್ಕೆ insurance ಕಟ್ಟಿದ್ದೇನೆ ಎಂದು ನುಡಿಯುತ್ತಾರೆ.

**ಪಾಟೀಸವಾಲು- 3 ನೇ ಎದುರುದಾರರ ಪರ ಶ್ರೀ ಸಿ.ಎಮ್.ಕೆ ವಕೀಲರಿಂದಃ**

ನಾನು 30-06-2022 ರಂದು ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ spices ಬೋರ್ಡ್ ನಿಂದ ನಿವೃತ್ತಿ ಹೊಂದಿದ್ದೇನೆ. ನನಗೆ 31,000/- ದಷ್ಟು ನನಗೆ ಪಿಂಚಣಿ ಬರುತ್ತದೆ. ನಾನು ಫಾರಂ ಮ್ಯಾನೇಜರ್ ಆಗಿ ನಿವೃತ್ತಿ ಹೊಂದಿದ್ದೇನೆ. ನನಗೆ ಪಿಂಚಣಿ ಕಡಿತ ಆಗುವಂತಹ ಯಾವುದೇ ಸಾಲಗಳು ಇಲ್ಲ. ನಾನು ಕೇಂದ್ರ ಸರ್ಕಾರದ ಅಧೀನ ಬೋರ್ಡಿನಲ್ಲಿ ಕೆಲಸ ಮಾಡುತಿದ್ದ ಕಾರಣ ನನಗೆ 31,000/- ಕ್ಕಿಂತ ಜಾಸ್ತಿ ಪಿಂಚಣಿ ಬರುತ್ತದೆ ಎಂದರೆ ಸರಿಯಲ್ಲ.

Swift ಕಾರು ಮಡಿಕೇರಿಯಿಂದ ಭಾಗಮಂಡಲ ಕಡೆಗೆ ಹೋಗುತಿತ್ತು. ಭಾಗಮಂಡಲದ ಕಡೆಗೆ ತಿರುಗಿದ್ದ ಕಾರನ್ನು ನಾನು ಮಡಿಕೇರಿ ಕಡೆಗೆ ತಿರುಗಿಸಿ ಬರುತಿದ್ದೆ. ನಾನು ನನ್ನ ವಾಹನವನ್ನು ಮಡಿಕೇರಿ ಕಡೆಗೆ ತಿರುಗಿಸುತ್ತಾ ಇರುವ ಸಂದರ್ಭದಲ್ಲಿ swift ಕಾರು ಬಂದಿತ್ತು. ಅಲ್ಲಿ ರಸ್ತೆ ಸುಮಾರು 12 ಅಡಿ ಅಗಲ ಇದ್ದಿರಬಹುದು. ಸದರಿ ರಸ್ತೆ ನೇರವಾದ ರಸ್ತೆ. ನಾನು ವಾಹನವನ್ನು ಚಲಾಯಿಸುವ ಸಂದರ್ಭದಲ್ಲಿ ಕನ್ನಡಕ ಉಪಯೋಗಿಸುವುದಿಲ್ಲ. ನನ್ನ ವಾಹನದ ಎರಡು ಬದಿಗೆ ಕನ್ನಡಿ ಇದೆ. ನಾನು ಸಾವಿನ ಮನೆಯಿಂದ ವಾಪಸ್ಸು ಬರುತಿದ್ದೆ. ವಯೋಸಹಜದಿಂದ ನಾನು ಹಿಂದೆ ಬಂದ ವಾಹವನ್ನು ಗಮನಿಸದೆ ಏಕಾಏಕಿ ನನ್ನ ವಾಹವನ್ನು ಮಡಿಕೇರಿ ಕಡೆಗೆ ತಿರುಗಿಸಿದ್ದೆ ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ವಾಹನ ರಸ್ತೆಯ ಮಧ್ಯಕ್ಕೆ ಬಂದು ನನ್ನ

ಅಜಾಗರೂಕತೆಯಿಂದ ಅಪಘಾತ ಆಗಿತ್ತು ಎಂದರೆ ಸರಿಯಲ್ಲ. ವಾಹನದ ಬಲಬದಿಯ ಕನ್ನಡಿಯಲ್ಲಿ ಹಿಂದೆ ಬರುತಿದ್ದ ವಾಹವನ್ನು ನಾನು ಗಮನಿಸಿದ್ದೇನೆ. ಹಿಂದೆ ಬರುತಿದ್ದ ವಾಹನ ಬರುವುದನ್ನು ಗಮನಿಸಿ ನಾನು ಅದು ಹೋದ ಬಳಿಕ ನನಗೆ ವಾಹನವನ್ನು ತಿರುಗಿಸಬಹುದಿತ್ತು ಎಂದರೆ ಸಾಕ್ಷಿ ನನಗೆ ಗಾಡಿ ಬಂದದ್ದು ಕಂಡಿರಲಿಲ್ಲ ಎಂದು ನುಡಿಯುತ್ತಾರೆ.

ನನಗೆ ಆಸ್ಪತ್ರೆಯಿಂದ ಬಿಲ್ ವಾಪಸ್ಸು ಸಿಕ್ಕಿಲ್ಲ. ನನಗೆ ಆರೋಗ್ಯ ವಿಮೆ ಇದ್ದಿರಲಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಷ್ಟು ಖರ್ಚು ನನ್ನ ವೈದ್ಯಕೀಯ ಚಿಕಿತ್ಸೆಗೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಒಂದು ದಿನ ಇದ್ದೆ. ನನ್ನ ಜೊತೆ ನನ್ನ ಸೊಸೆ ಇದ್ದರು.

ನನಗೆ ತೋಟ ಇದೆ ಎಂದು ಹೇಳಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ದೈಹಿಕವಾಗಿ ನಾನು ಅಪಘಾತದ ಮೊದಲು ಹೇಗೆ ಇದ್ದೆನೋ ಅದೇ ರೀತಿಯಾಗಿ ಇದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ನನಗೆ ಜ್ಞಾಪಕ ಶಕ್ತಿ ಇಲ್ಲ ಎಂದು ನುಡಿಯುತ್ತಾರೆ. ಅಪಘಾತದಿಂದ ನನಗೆ ಜ್ಞಾಪಕ ಶಕ್ತಿ ಕಡಿಮೆ ಆಗಿದೆ ಎಂದು ಯಾವುದೇ ವೈದ್ಯಕೀಯ ದೃಢೀಕರಣ ಪತ್ರ ನೀಡಿಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ನನಗೆ ಕೃಷಿಕಾರ್ಯಗಳನ್ನು ಮಾಡಲು ಕಷ್ಟವಾಗುತ್ತದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ನನ್ನ ವಾಹನಕ್ಕೆ ನಿಪಿ-18 ರ ಪ್ರಕಾರ package policy ಇದೆ. ಅಪಘಾತ ಆದ ಒಂದೂವರೆ ತಿಂಗಳ ನಂತರ ನಾನು ಕುಶಾಲನಗರದಲ್ಲಿ ನನ್ನ ವಾಹನವನ್ನು ರಿಪೇರಿ ಮಾಡಿಸಿದ್ದೇನೆ. ಒಂದೂವರೆ ತಿಂಗಳ ಮೊದಲು ಹಾಗೂ ನಂತರ ನಾನು 4ನೇ ಎದುರುದಾರರ ಬಳಿಗೆ ಹೋಗಿ ನನ್ನ ವಾಹನಕ್ಕೆ ವಿಮಾ ಕಂತನ್ನು ಪಾವತಿ ಮಾಡಿದ ಕಾರಣ ಪರಿಹಾರ ಕೋರಿದ್ದೆ ಆದರೆ 4ನೇ

ಎದುರುದಾರ ಅಪಘಾತ ಆದ ದಿನವೇ ವಾಹನವನ್ನು ತೋರಿಸಬೇಕಿತ್ತು ಎಂದು ಹೇಳಿ ಪರಿಹಾರ ನೀಡಲು ಆಗುವುದಿಲ್ಲ ಎಂದು ಹೇಳಿದ್ದರು. ಆ ಬಳಿಕ ನಾನು ಲಿಖಿತವಾಗಿ ಅವರ ಬಳಿ ಯಾವುದೇ ಪರಿಹಾರ ಕೇಳಿಲ್ಲ. ನನ್ನ ವಾಹನಕ್ಕೆ ಜಖಂ ಆದ ಬಗ್ಗೆ ನನ್ನ ಬಳಿ ಫೋಟೊಗಳು ಇವೆ. ವಾಹನದ ಇಂಜಿನ್ ಗೆ ಸಹ ಸ್ವಲ್ಪ ಏಟಾಗಿತ್ತು. ವಾಹನದ ಇಂಜಿನ್ ಗೆ ಜಖಂ ಆಗಿದೆ ಎಂದು ಅದನ್ನು ವಾಹನದಿಂದ ಬೇರ್ಪಡಿಸಿದ ಸಂದರ್ಭದಲ್ಲಿ ತೆಗೆದ ಫೋಟೊಗಳು ಇವೆ ಅವುಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನನ್ನ ವಾಹನಕ್ಕೆ ಜಖಂ ಆದ ಬಗ್ಗೆ ಯಾವುದೇ ಸರ್ವೆ report ನ್ನು ಮಾಡಿಸಿಲ್ಲ. ವಾಹನಕ್ಕೆ ನಾನು ಯಾವುದೇ ಸರ್ವೆ report ನ್ನು ಲೈಸೆನ್ಸ್ ಸರ್ವೆಯರ್ ಮೂಲಕ ಅವರನ್ನು ಕುಶಾಲನಗರಕ್ಕೆ ಕರೆದುಕೊಂಡು ಹೋಗಿ ಮಾಡಿಸಿಲ್ಲ. ವಾಹನಕ್ಕೆ ಜಖಂ ಆದ ಬಗ್ಗೆ ಕೊಡಗಿನಿಂದ ಹೊರಗಡೆ ನಾನು ಯಾವುದೇ ಬಿಲ್ ಆಗಲೀ quotation ಆಗಲಿ ಪಡೆದುಕೊಂಡಿಲ್ಲ. ಸದರಿ work shop ನ ಹೆಸರು ನನಗೆ ನೆನಪಿಲ್ಲ. ನಾನು ಹಾಜರುಪಡಿಸಿದ ಬಿಲ್ಲುಗಳಲ್ಲಿ ಯಾವುದೇ GST bill ಅಥವಾ TIN ಬಿಲ್ಲುಗಳು ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಕೆಲವು ಬಿಲ್ಲುಗಳಲ್ಲಿ ಇಲ್ಲ ಎಂದು ನುಡಿಯುತ್ತಾರೆ. Workshop ಅವರು ವಾಹನದ ಬಿಡಿಭಾಗಗಳನ್ನು ಹೊರಗಡೆಯಿಂದ ಖರೀದಿಸಿದ್ದಾರೆ. ಬಿಲ್ಲುಗಳನ್ನು ಪಾವತಿ ಮಾಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಬಿಲ್ಲುಗಳನ್ನು ನಾಲ್ಕು ಕಂತುಗಳಲ್ಲಿ ನಗದಾಗಿ workshop ಅವರಿಗೆ ಪಾವತಿ ಮಾಡಿದ್ದೇನೆ. ನಾನು ಹಣ ಪಾವತಿ ಮಾಡಿದ ಬಗ್ಗೆ ನನ್ನ ಬಳಿ ರಶೀದಿಗಳು ಇಲ್ಲ. ನಿಪಿ-6 ರಿಂದ ನಿಪಿ-14 ಹಾಗೂ ನಿಪಿ-19 ರಲ್ಲಿ ಬಿಲ್ಲು ನೀಡಿದ ಸಂಸ್ಥೆಯ ಸೀಲು ಇಲ್ಲ ಎಂದರೆ ಸರಿ. ನನ್ನ ವಾಹನಕ್ಕೆ ಯಾವುದೇ ಜಖಂ ಆಗಿಲ್ಲ ಎಂದರೆ ಸರಿಯಲ್ಲ. ಕುಶಾಲನಗರ workshop ನಲ್ಲಿ ನಾನು ನನ್ನ ವಾಹನವನ್ನು ರಿಪೇರಿಗೆ ಬಿಟ್ಟಿರಲಿಲ್ಲ ಎಂದರೆ ಸುಳ್ಳು. ವಾಹನಕ್ಕೆ ಯಾವುದೇ ಜಖಂ ಆಗಿದೆ

workshop ನಲ್ಲಿ ಅದನ್ನು ರಿಪೇರಿಗೆ ಬಿಟ್ಟಿದ್ದೇನೆ ಎಂದು ಸುಳ್ಳು ಬಿಲ್ಲುಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನನ್ನ ವಾಹನಕ್ಕೆ ಜಖಂ ಆಗಿದ್ದರೆ 4 ನೇ ಎದುರುದಾರರಿಂದ ಪರಿಹಾರವನ್ನು ಪಡೆದುಕೊಳ್ಳುತಿದ್ದೆ ಎಂದರೆ ಸರಿಯಲ್ಲ. ನಿಜಾಂಶವನ್ನು ಮರೆಮಾಚಿ ವಾಹನಕ್ಕೆ ಜಖಂ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ನನಗೆ ಯಾವುದೇ ಖರ್ಚು-ವೆಚ್ಚಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆದ ಕಾರಣ ಒಂದು ದಿನ ತಡವಾಗಿ ನಾನು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು-1 ಮತ್ತು 2 ನೇ ಎದುರುದಾರರ ಪರ ಶ್ರೀ ಎನ್.ಜಿ.ಎ ವಕೀಲರಿಂದಃ</u>**

1 ಮತ್ತು 2 ನೇ ಎದುರುದಾರರ ಪರ ವಕೀಲರು ನ್ಯಾಯಾಲಯದಲ್ಲಿ ಗೈರುಹಾಜರಾಗಿದ್ದು, ಅವರ ಪರ ಪ್ರಾತಿನಿಧ್ಯ ಇಲ್ಲದ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.